## ಸೂಕ್ತಿಪ್ರಭ

**ಧ್ಯಾನ** ಗಾಢವಾದಾಗ ಸಾಧಕನ ಬಾಹ್ಯ ಜ್ಞಾನ ಶೂನ್ಯವಾಗಿಬಿಡುತ್ತದೆ... ಧ್ಯಾನದ ಸಮಯದಲ್ಲಿ ಮನಸ್ಸು ಅಂಥ ಏಕಾಗ್ರತೆಯನ್ನು ಹೊಂದಿರುತ್ತದೆ! ಆಗ ಏನನ್ನು ನೋಡುವುದಕ್ಕೂ ಆಗುವುದಿಲ್ಲ, ಕೇಳುವುದಕ್ಕೂ ಆಗುವುದಿಲ್ಲ. ಸ್ಪರ್ಶದ ಬೋಧೆ ಕೂಡ ಆಗುವುದಿಲ್ಲ. ಧ್ಯಾನಸ್ಥನಿಗೆ ಹಾವು ತನ್ನ ಮೈಮೇಲೆ ಹರಿದುಹೋದುದು ಗೊತ್ತಾಗದು. ಅದೇ ರೀತಿಯಾಗಿ ಹಾವಿಗೂ ತಾನು ಮನುಷ್ಯನ ದೇಹದ ಮೇಲೆ ಹರಿದುಹೋಗುತ್ತಿದ್ದೇನೆ ಎಂಬ ಭಾವನೆಯೇ ಉಂಟಾಗದು.

**ಯಾವ** ಶರೀರ, ಮನಸ್ಸು, ಆತ್ಮ ಇವುಗಳಿಂದ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಬಹುದೊ, ಅದನ್ನು ತೆಗೆದುಕೊಂಡು ಹೋಗಿ ಈ ಸಾಮಾನ್ಯ ಐಹಿಕ ವಸ್ತುಗಳಿಗಾಗಿ ಮಾರುವುದು ಒಳ್ಳೆಯದಲ್ಲ.

**ವ್ಯಾಕುಲ** ಚಿತ್ತದಿಂದ ಆತನನ್ನು ಪ್ರಾರ್ಥಿಸು. ವಿವೇಕಕ್ಕಾಗಿ ಆತನಿಗೆ ಪ್ರಾರ್ಥನೆ ಮಾಡಿಕೊ. 'ಭಗವಂತನೊಬ್ಬನೇ ಸತ್ಯ, ಉಳಿದುದೆಲ್ಲ ಅನಿತ್ಯ'—ವಿವೇಕ ಎಂಬುದು ಇದೇನೆ. ನೀರು ಸೋಸುವ ಯಂತ್ರದಿಂದ ನೀರನ್ನು ಶೋಧಿಸಿ ತೆಗೆದುಕೊಳ್ಳಬೇಕು. ಕೊಳೆಯನ್ನು ಹಿಂದೆ ಬಿಟ್ಟು ಶುದ್ಧವಾದ ನೀರು ಈ ಯಂತ್ರದಿಂದ ಹೊರಕ್ಕೆ ಬರುತ್ತದೆ. ವಿವೇಕವೆಂಬ ನೀರು ಸೋಸುವ ಯಂತ್ರವನ್ನು ಈ ಸಂಸಾರಸಾಗರದಲ್ಲಿ ಉಪಯೋಗಿಸು. ಮೊದಲು ಆತನ ಸಾಕ್ಷಾತ್ಕಾರವನ್ನು ಪಡೆದು, ಬಳಿಕ ಬೇಕಾದರೆ ಸಂಸಾರದಲ್ಲಿ ಇರು. ಆಗ ಅದು ವಿದ್ಯೆಯ ಸಂಸಾರವಾಗುತ್ತದೆ.

**ಎಲ್ಲರೂ** ಕಾಮಕಾಂಚನದಿಂದ ಮೋಹಿತರಾಗಿ ಹೋಗಿದ್ದಾರೆ. ಆದರೆ ನನಗೆ ಮಾತ್ರ ಅವೆಲ್ಲ ಒಂದು ಕಿಂಚಿತ್ತೂ ರುಚಿಸುತ್ತಿಲ್ಲ. ಬೇಕಾದರೆ ನಾನು ಆಣೆಯಿಟ್ಟು, ಭಗವಂತನೊಬ್ಬನ ವಿನಾ ನನಗೆ ಬೇರೆ ಏನೂ ಗೊತ್ತಿಲ್ಲ ಅಂತ ಹೇಳುತ್ತೇನೆ.

**ಮತಗಳು** ಅನೇಕ ಇವೆ. ಮತವಿದ್ದಂತೆ ಪಥ. ಆದರೆ ಪ್ರತಿಯೊಬ್ಬನೂ ಭಾವಿಸುತ್ತಾನೆ ತನ್ನ ಮತವೇ ಸರಿ, ತನ್ನ ಗಡಿಯಾರವೇ ಸರಿಯಾಗಿ ನಡೆದುಕೊಂಡು ಹೋಗುತ್ತಿದೆ ಅಂತ.

**ಸತ್ಯವಚನವೇ** ಕಲಿಯುಗದ ತಪಸ್ಸು. ಈ ಯುಗದಲ್ಲಿ ಬೇರೆ ವಿಧದ ತಪಸ್ಸುಗಳನ್ನು ಮಾಡುವುದು ಬಹಳ ಕಠಿಣ. ಸತ್ಯಾರ್ಥಿಗೆ ಭಗವಂತ ದೊರೆತುಬಿಡುತ್ತಾನೆ. ತುಳಸೀದಾಸ ಹೇಳುತ್ತಾನೆ, 'ಸತ್ಯವಚನ, ಭಗವದಧೀನತೆ, ಪರಸ್ತ್ರೀಯರಲ್ಲಿ ಮಾತೃದರ್ಶನ ಇವು ಮೂರು ಮಹಾ ಸದ್ಗುಣಗಳು. ಇವುಗಳ ಅನುಷ್ಠಾನದಿಂದ ಒಂದು ಪಕ್ಷ ಭಗವಂತನ ಸಾಕ್ಷಾತ್ಕಾರ ದೊರೆಯದೆ ಇದ್ದರೆ ತುಳಸೀದಾಸನನ್ನು ಮಿಥ್ಯಾವಾದಿ ಅಂತ ಕರೆಯಿರಿ.'

- **ಶ್ರೀರಾಮಕೃಷ್ಣ ವಚನವೇದದಿಂದ**

## ಪ್ರಾರ್ಥನೆ

### ತೇಲುತಲಿರು ಹಂಸ

ತೇಲುತಲಿರು ತೇಲುತಲಿರು
ತೇಲುತಲಿರು ಹಂಸ
ಜಲರೂಪಿಣಿ ಭವತಾರಿಣಿ
ದೇವಿಗೆ ನೀನವತಂಸ ॥ಪ॥

ಮಾನಸ ಸರೋವರ ಅಮವೆ ನಿನ್ನಾಗರ
ಪರಮಹಂಸನೆ ಅಲ್ಲೆ ನಿನ್ನ ರಕ್ಕೆಗಳ ಜಾಗರ ॥೧॥

ಶ್ವೇತಹಂಸನೆ ನಿನ್ನ ತುಪ್ಪುಳೆಲ್ಲಾ ಬಿಳಿ
ನಡತೆ ಬಿಳಿ ಮಾತು ಬಿಳಿ
ಅಂತರಂಗದ ನಿಲುವು ಬಿಳಿದೋ ಬಿಳಿ
ಸುಳಿದೀತೆ ನಿನ್ನ ಬಳಿ ಕಪ್ಪನೆ 'ಸುಳಿ'? ॥೨॥

ದಕ್ಷಿಣೇಶ್ವರದ ಬಳಿ ಗಂಗೆಯಲಿ ತೇಲಿ
ಹಾಡಿದೆ ನೀ ಕಲ್ಯಾಣದ 'ಲಾಲಿ' ॥೩॥

ನೀರೆಲ್ಲ ನಿನ್ನ ಮೈ ಅದರ ಆಚೆಗೆ ಕೊಕ್ಕು
ಒದರುತ ಕೊಡವಿದೆ ಲೋಕದ ಸುಕ್ಕು ॥೪॥

ಜಲದಂಬೆ ಜಗದಂಬೆ—ತಾವರೆಯ ನಾಳ
ನಿನಗದೇ ಆಹಾರ ಶುದ್ಧಾಂತರಾಳ ॥೫॥

ಹಂಸಸ್ಸೋಽಹಂ ಸೋಽಹಂ ಎಂದೆ
ತಾಯಿಗೊಪ್ಪಿಸಿ ಅಹಮ್ಮನು ಕೊಂದೆ ॥೬॥

ಈರುಳ್ಳಿಯನ್ನಹಮಿಗೆ ಹೋಲಿಸಿದೆ
ಸುಲಿದು ಪದರವನು ಶೂನ್ಯವ ತೋರಿದೆ ॥೭॥

ರೆಕ್ಕೆಗಳೆರಡಿವೆ—ವಿವೇಕ - ಶಾರದೆ
ಸಲೀಲಗಮನದ ಶ್ರೇಯವು ನಿನದೆ ॥೮॥

(ರಚನೆ: ಅ.ರಾ. ಮಿತ್ರ)

**(ಮುಖಪುಟ ಚಿತ್ರಕ್ಕೆ ಅನುಗುಣವಾದ ಕವನ)**